**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ : 54/2017**

**ಪಿ ಡಬ್ಲ್ಯೂ - 1**

**ಸಿ ಡಬ್ಲ್ಯೂ - 1**

**ದಿಃ 02.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಹನುಮಂತಪ್ಪ**

**ತಂದೆಯ ಹೆಸರು ಃ ಚಿಕ್ಕೇಗೌಡ**

**ವಯಸ್ಸು ಃ 62 ವರ್ಷ**

**ಉದ್ಯೋಗ ಃ ನಿವೃತ್ತ ಶಿಕ್ಷಣಾಧಿಕಾರಿ**

**ವಿಳಾಸ ಃ ಬೆಂಗಳೂರು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು ದಿಃ 05.08.2014 ರಿಂದ ದಿಃ 25.07.2017 ರ ವರೆಗೂ ನಾನು ದೊಡ್ಡಬಳ್ಳಾಪುರ ಕ್ಷೇತ್ರ ಶಿಕ್ಷಣಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 09.06.2016 ರಂದು ನನ್ನ ಅಧಿಕಾರಿ ವ್ಯಾಪ್ತಿಗೆ ಒಳಪಟ್ಟ ದೊಡ್ಡಬೆಳವಂಗಲ ಹೋಬಳಿ, ಚಿಕ್ಕಹೆಜ್ಜಾಜಿ ಕಾಲೋನಿಯಲ್ಲಿದ್ದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಸೇರಿದ ಸರ್ವೇ ನಂ. 14 ರಲ್ಲಿನ 4 ಎಕರೆ 28 ಗುಂಟೆ ಜಮೀನಿನಲ್ಲಿ 1 ನೇ ಆರೋಪಿಯು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಅಲ್ಲಿ ಷೆಡ್ಡನ್ನು ನಿರ್ಮಿಸಿಕೊಂಡಿದ್ದರು. ಅದೇ ಸಮಯದಲ್ಲಿ 2 ನೇ ಆರೋಪಿಯು 1 ಎಕರೆಯಷ್ಟು ಜಮೀನನ್ನು ಉಳುಮೆ ಮಾಡಿದ್ದನು. ದಿಃ 10.06.2016 ರಂದು ಈ 2 ಆರೋಪಿತರ ವಿರುದ್ಧ ನಾನು ಸರ್ಕಾರಿ ಶಾಲೆಯ ಆಟದ ಮೈದಾನವನ್ನು ಒತ್ತುವರಿ ಮಾಡಿ ಅತಿಕ್ರಮ ಮಾಡಿರುವುದಕ್ಕೆ ಸಂಬಂಧಿಸಿದಂತೆ ದೂರನ್ನು ದಾಖಲಿಸಿರುತ್ತೇನೆ. ಆದರೆ ಸದರಿ ದೂರಿನ ಕ್ರಮ ಯಾವುದೇ ಕ್ರಮ ಕೈಗೊಳ್ಳದ ಕಾರಣ ಮತ್ತೊಂದು ದೂರನ್ನು 18 ನೇ ತಾರೀಖು 2016 ರಂದು ದಾಖಲಿಸಿರುತ್ತೇನೆ. ತಿಂಗಳು ಈಗ ನೆನಪಾಗುತ್ತಿಲ್ಲ. ಸಾಕ್ಷಿಯು ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಜಮೀನು ದಿಃ 26.06.2014 ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳು ಜಮೀನನ್ನು ಸರ್ಕಾರಿ ಶಾಲೆಯ ಆಟದ ಮೈದಾನಕ್ಕಾಗಿ

ಮಂಜೂರು ಮಾಡಿದ್ದ ಜಮೀನಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. (2 ನೇ ಆರೋಪಿಯು ಈ ದಿನ ಗೈರು ಹಾಜರಿದ್ದು, 2 ನೇ ಆರೋಪಿಯ ಗುರುತಿಸುವಿಕೆಯನ್ನು 2 ನೇ ಆರೋಪಿಯ ಪರ ವಕೀಲರು ಅಲ್ಲಗಳೆದಿರುವುದಿಲ್ಲ.)

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ. ಎ.ಎನ್.ಎಸ್., ವಕೀಲರಿಂದ**

ಜಮೀನು ಅತೀಕ್ರಮಣವಾಗಿದೆ ಎಂಬ ಮಾಹಿತಿಯನ್ನು ಶಾಲೆಯ ಮುಖ್ಯೋಪಾಧ್ಯಾಯರು ನನಗೆ ದಿಃ 09.06.2016 ರಂದು ಲಿಖಿತವಾಗಿ ಕೊಟ್ಟಿದ್ದರು. ಸದರಿ ಲಿಖಿತವಾಗಿ ಕೊಟ್ಟಂತಹ ಮಾಹಿತಿಯನ್ನು ನಾನು ಪೋಲೀಸರಿಗೆ ಕೊಟ್ಟಿರುತ್ತೇನೆ. ಮಾಹಿತಿಯನ್ನು ನನಗೆ ಮಧ್ಯಾಹ್ನದ ಸಂದರ್ಭದಲ್ಲಿ ಕೊಡಲಾಗಿತ್ತು. ಶಾಲೆಯ ಮಖ್ಯೋಪಾಧ್ಯಾಯರ ಹೆಸರು ಈಗ ನೆನಪಾಗುತ್ತಿಲ್ಲ. ಅತೀಕ್ರಮಣವನ್ನು ದಿಃ 09.06.2016 ರಂದು ಬೆಳಿಗ್ಗೆ ಮಾಡಿರುತ್ತಾರೆಂದು ತಿಳಿಸಿದ್ದರು. ನಾನು ಆ ಸಮಯದಲ್ಲಿ ಕಛೇರಿಯಲ್ಲಿರುವ ಬಗ್ಗೆ ನನಗೆ ನೆನಪಿಲ್ಲ. ಲಿಖಿತ ಮಾಹಿತಿಯನ್ನು ನಮ್ಮ ಕಛೇರಿಗೆ ತಲುಪಿಸಿದ್ದರು. ಸರ್ವೇ ನಂ.14 ರ ಜಮೀನನ್ನು ನಾವು ಮಹಜರ್ ಮಾಡಿರುವುದಿಲ್ಲ. ಸರ್ವೇ ನಂ. 14 ರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮತ್ತೊಂದು ರಸ್ತೆ, ಉತ್ತರಕ್ಕೆ ಸರ್ವೇ ನಂ. 14 ರ ಉಳಿದ ಭಾಗ ಹಾಗೂ ದಕ್ಷಿಣಕ್ಕೆ ಕಾಲೋನಿ ಮನೆಗಳು ಇರುತ್ತವೆ. ಸರ್ವೇ ನಂ.14 ರ ಉತ್ತರದ ಭಾಗದ ಉಳಿಕೆ ಜಮೀನಿನಲ್ಲಿ 1 ನೇ ಆರೋಪಿಗೆ 18 ಗುಂಟೆ ಜಮೀನು ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳಿರುವ ಸರ್ವೇ ನಂ. 14 ರ ಜಮೀನಿನ ಚೆಕ್ಕುಬಂಧಿಯನ್ನು ನಾನು ದಾಖಲೆಯನ್ನು ನೋಡಿ ಹೇಳಿರುತ್ತೇನೆ. ನಾನು ಸರ್ವೇ ನಂ. 14 ರ ಜಮೀನನ್ನು ದೂರು ದಾಖಲಿಸುವ ಪೂರ್ವದಲ್ಲಿ ಹಾಗೂ ಆ ನಂತರವೂ ಸ್ಥಳಕ್ಕೆ ಹೋಗಿ ನೋಡಿರುತ್ತೇನೆ. ಸರ್ವೇ ನಂ. 14 ನಾನು ಹೇಳಿರುವ ಚೆಕ್ಕುಬಂಧಿಯಲ್ಲಿ 4 ಎಕರೆ 28 ಗುಂಟೆ ಇರುತ್ತದೆ.

ಸರ್ವೇ ನಂ. 14 ರ 4 ಎಕರೆ 28 ಗುಂಟೆ ಜಮೀನನ್ನು ಸರ್ವೇ ಮಾಡಿ ಗಡಿಯನ್ನು ನಿಗದಿಪಡಿಸಿಕೊಡುವಂತೆ ಕೋರಿ ಮಾನ್ಯ ತಹಶೀಲ್ದಾರ್ ರವರಿಗೆ ದಿಃ 26.09.2014 ರಂದು ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಯ ಆಧಾರದ ಮೇಲೆ ಜಮೀನಿನ ಸರ್ವೇಯನ್ನು ಕೈಗೊಂಡ ಬಗ್ಗೆ ನನಗೆ ನೆನಪಿಲ್ಲ. ಸರ್ವೇ ನಂ. 14 ರ ಜಮೀನನ್ನು ಸರ್ವೇ ಮಾಡಿಯೇ ಇಲ್ಲ ಆದ್ದರಿಂದ ನಾನು ನೆನಪಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ಮಾಡಿಸಿದ ದಾಖಲೆಗಳನ್ನು ಪೋಲೀಸರಿಗೆ ಕೊಟ್ಟಿರುವುದಿಲ್ಲ. ಆರೋಪಿತರು ಯಾವುದೇ ಜಮೀನನ್ನು ಒತ್ತುವರಿ

ಮಾಡದೇ ಇದ್ದರೂ ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ನೋಡಿರುವುದು ಎಂದರೆ ಸರಿಯಲ್ಲ. ಆರೋಪಿತರನ್ನು ಈ ಮುಂಚೆ ನಾನು ಊರಿನಲ್ಲಿ ನೋಡಿರುತ್ತೇನೆ, ಯಾವಾಗ ಎಂದು ನಿಖರವಾಗಿ ದಿನಾಂಕ ನೆನಪಿಲ್ಲ. ಸರ್ವೇ ನಂ. 14, 4 ಎಕರೆ 28 ಗುಂಟೆ ಜಮೀನು ಎಂದು ತೋರಿಸುವ ಯಾವುದೇ ದಾಖಲೆಗಳನ್ನು ಪೋಲೀಸರಿಗೆ ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಇದೇ ಜಮೀನಿಗೆ ಸಂಬಂಧಿಸಿದಂತೆ ಚಾಸಾ-2 ರವರು ಕೂಡ 1 ನೇ ಆರೋಪಿಯ ವಿರುದ್ಧ ದೂರನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**